# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC 1225/2023**

**PW 3**

| | | |
|---|---|---|
| ಸಾಕ್ಷಿಯ ಹೆಸರು | ಃ | ಕೆ. ಪದ್ಮನಾಭ ಶೆಣೈ |
| ತಂದೆ ಹೆಸರು | ಃ | ಕೆ. ನರಸಿಂಹ ಶೆಣೈ |
| ಪ್ರಾಯ | ಃ | 77 ವರ್ಷ |
| ಉದ್ಯೋಗ | ಃ | ಇನ್ಸೂರೆನ್ಸ್ ಸರ್ವೆಯರ್ |
| ವಾಸ | ಃ | ಕಾರ್ಕಳ |

ದಿನಾಂಕ **: 01.12.2025** ರಂದು ಪಿಡಬ್ಲ್ಯೂ - 3 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀಮತಿ ಕೆ.ಎಸ್. ಅರ್ಜಿದಾರರು ಪರ ವಕೀಲರಿಂದಃ

ನಾನು ಈ ಕೇಸಿನ ಸಾಕ್ಷಿದಾರ. ನ್ಯಾಯಾಲಯದಿಂದ ಸಮನ್ಸ ಜಾರಿಯಾದ ಮೇರೆಗೆ ಹಾಜರಾಗಿ ಸಾಕ್ಷಿ ನುಡಿಯುತ್ತಿದ್ದೇನೆ.

ವಾಹನ ಸಂಖ್ಯೆ ಕೆಎ 15 ಎಮ್.- 2922 ಇದನ್ನು ಪರಿಶೀಲಿಸಿ ನಿಪಿ - 12 ರಂತೆ ವರದಿಯನ್ನು ನಾನೇ ನೀಡಿದ್ದೇನೆ. ಅದರಲ್ಲಿರುವ ಪ್ರತೀ ಪುಟದಲ್ಲಿನ ಸಹಿಗಳು ನನ್ನದಾಗಿದ್ದು, ಒಟ್ಟು 10 ಸಹಿಗಳಿದ್ದು, ನಿಪಿ - 12 ರ ಕಡೆಯ ಪುಟದಲ್ಲಿನ ನನ್ನ ಸಹಿಯನ್ನು ನಿಪಿ - 12(ಎ) ಎಂದು ಗುರುತಿಸಲಾಯಿತು. ನಿಪಿ - 10 ನ್ನು ಸಹಾ ನಾನೇ ನೀಡಿದ್ದೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ - 10(ಎ) ಎಂದು ಗುರುತಿಸಲಾಯಿತು. ನಿಪಿ - 10 ರಲ್ಲಿ ನಮೂದಿಸಿರುವುದು ನನ್ನ ಪ್ರೊಫೆಷನಲ್ ಫೀ ಆಗಿರುತ್ತದೆ.

<u>ಪಾಟೀ ಸವಾಲುಃ</u> ಶ್ರೀ ಎ.ಎಮ್. 3 ನೇ ಎದುರುದಾರರ ಪರ ವಕೀಲರಿಂದಃ

ನಾನು ಪರಿಶೀಲಿಸಿದ ಓಮ್ನಿ ವಾಹನ 2009 ರ ಮಾಡೆಲ್ ಆಗಿರುತ್ತದೆ. ನಾನು ವರದಿಯನ್ನು 2021 ರಲ್ಲಿ ನೀಡಿದ್ದೇನೆ. ನಾನು ವಾಹನವನ್ನು ಪರಿಶೀಲಸಿದ ಸಮಯದಲ್ಲಿ ಸದರಿ ವಾಹನದ ಇನ್ಸೂರೆನ್ಸ್ ಡಿಕ್ಲೇರ್ಡ್ ವ್ಯಾಲ್ಯೂ ಎಷ್ಟು ಇರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ವಾಹನವು ಶೇಕಡಾ ವಾರು ಎಷ್ಟು ಹಾಳಾಗಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಅಪಘಾತದ ಪೂರ್ವದಲ್ಲಿ ಸದರಿ ವಾಹನದ ಸ್ಥಿತಿಗತಿಯ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ವಾಹನಕ್ಕೆ ಆಗಿರುವಂತಹ ಹಾನಿಯು ಯಾವ ಕಾರಣದಿಂದ ಆಗಿದೆ ಎಂದು ನನಗೆ ವೈಯಕ್ತಿಕವಾಗಿ ಹೇಳಲು ಆಗುವುದಿಲ್ಲ. ಆದರೆ

ದಾಖಲೆಗಳ ಪ್ರಕಾರ ಅಪಘಾತದಿಂದ ಆಗಿರುತ್ತದೆ ಎಂದು ಕಂಡು ಬರುತ್ತದೆ. ಸದರಿ ವಾಹನ ಹಳೆಯ ವಾಹನವಾದ ಕಾರಣ, ಅಪಘಾತವಾಗಿದೆ ಎಂದು ಹೇಳುವ ಪೂರ್ವದಲ್ಲಿಯೇ ಸಾಕಷ್ಟು ಹಾನಿಗೊಳಗಾಗಿತ್ತು ಎಂದರೆ ಸರಿಯಲ್ಲ. ವಾಹನವನ್ನು ಪರಿಶೀಲಿಸಿದಾಗ ಅವುಗಳಲ್ಲಿನ ನ್ಯೂನ್ಯತೆಯನ್ನು ನೋಡಿ ಅವುಗಳು ಅಪಘಾತದಿಂದ ಆದಂತಹ ತೊಂದರೆಗಳು ಎಂದು ಹೇಳಲು ಸಾಧ್ಯವಾಗುತ್ತದೆ. ಉದ್ದೇಶಪೂರ್ವಕವಾಗಿ ಸದರಿ ವಾಹನಕ್ಕೆ ಹಾನಿ ಮಾಡಲಾಗಿದೆಯೇ ಎಂದು ನನಗೆ ಹೇಳಲು ಆಗುವುದಿಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಹೆಚ್ಚು ಹಾನಿ ಆಗಿದೆ ಎಂದು ಸುಳ್ಳು ವರದಿ ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,
ಕಾರ್ಕಳ.